# ಪ್ರಧಾನ ಹಿರಿಯ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ. ಹುಣಸೂರು.

## ಸಿ.ಸಿ. ಸಂಖ್ಯೆ: 69/2024

**ಸಾಕ್ಷಿಯನ್ನು ದಿಃ 17.03.2026 ರಂದು ಕರೆಸಿ ಪ್ರಮಾಣವಚನ ಬೋಧಿಸಲಾಯಿತು.**

| | | | |
|---|---|---|---|
| ಹೆಸರು | ಹರೀಶ | ಸಿಡಬ್ಲ್ಯೂ:05 | ಪಿಡಬ್ಲ್ಯೂ:08 |
| ತಂದೆಯ ಹೆಸರು | ಪುಟ್ಟಯ್ಯ | | |
| ವಯಸ್ಸು | 40 ವರ್ಷ | | |
| ಕೆಲಸ | ವ್ಯವಸಾಯ | | |
| ವಾಸಸ್ಥಳ | ಬೀಚಗನ ಹಳ್ಳಿ | | |

**ಮುಖ್ಯ ವಿಚಾರಣೆಃ ಮಾನ್ಯ ಸಸಅ ರವರಿಂದಃ**

ನನಗೆ ಚಾಸಾ-1 ಗೊತ್ತು. ಅವರು ಸುಮಾರು 2 ವರ್ಷದ ಹಿಂದೆ ನನ್ನನ್ನು ಬೀಚನಗನಹಳ್ಳಿಯಲ್ಲಿರುವ ಅವರ ಜಮೀನನ್ನು ಟ್ರಾಕ್ಟರ್ ನಲ್ಲಿ ಉಳುಮೆ ಮಾಡುವ ಸಲುವಾಗಿ ಕರೆದುಕೊಂಡು ಹೋದರು. ನಾವು ಜಮೀನಿಗೆ ಹೋದಾಗ ಮಧ್ಯಾಹ್ನ 2.00 ಗಂಟೆ ಆಗಿತ್ತು. ನಾನು ಟ್ರಾಕ್ಟರ್ ನಲ್ಲಿ ಚಾಸಾ-1 ರವರ ಜಮೀನನ್ನು ಉಳುತ್ತಿದ್ದೆ. ಆಗ ಚಾಸಾ-1 ರವರಿಗೂ ಪಕ್ಕದ ಜಮೀನಿನವರಿಗೂ ಸ್ವಲ್ಪ ಮಾತುಕತೆಯಾಯಿತು. ನಾನು ಟ್ರಾಕ್ಟರ್ ತೆಗೆದುಕೊಂಡು ವಾಪಸ್ಸು ಬಂದೆ. ಅಲ್ಲಿ ಅವರ ಮಧ್ಯೆ ಏನು ಮಾತುಕತೆ ಆಯಿತು, ಯಾರುಯಾರಿಗೆ ಏನೆಂದರು ಎಂದು ಗೊತ್ತಿಲ್ಲ. ಚಾಸಾ-1 ರವರ ಬಳಿ ಯಾರು ಗಲಾಟೆ ಮಾಡಿದರು ಎಂದು ನಾನು ನೋಡಿಲ್ಲ. ನಾನು ಗಲಾಟೆಯನ್ನು ಬಿಡಿಸಿಲ್ಲ. ಗಲಾಟೆಯನ್ನು ಕಣ್ಣಾರೆ ನೋಡಿಲ್ಲ. ಈ ಬಗ್ಗೆ ಪೊಲೀಸರ ಮುಂದೆ ಹೇಳಿಕೆ ಕೊಟ್ಟಿಲ್ಲ. ಗಲಾಟೆ ಮಾಡಿದವರ ಹೆಸರು ಗೊತ್ತಿಲ್ಲ.

**(ಈ ಹಂತದಲ್ಲಿ ಮಾನ್ಯ ಸಅಅ ಯವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿರುತ್ತಾರೆ. ಸಾಕ್ಷಿ ತನ್ನ ಸಾಕ್ಷ್ಯವನ್ನು ಅಭಿಯೋಜನೆಗೆ ಪ್ರತಿಕೂಲವಾಗಿ ನುಡಿದಿರುವ ಕಾರಣ ಅವರನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿಸಲಾಯಿತು)**

**ಪಾಟೀಸವಾಲುಃ ಮಾನ್ಯ ಸಸಅ ರವರಿಂದಃ**

ದಿನಾಂಕಃ 21.11.2023 ರಂದು ಬೆಳಿಗ್ಗೆ 10.00 ಗಂಟೆಗೆ ನಾನು ಚಾಸಾ-1 ರವರ ಜಮೀನಿನ ಹತ್ತಿರ ಹೋದಾಗ ಅಲ್ಲಿ ಚಾಸಾ-1 , 5 ,7 ಮತ್ತು 8 ರವರು ಇದ್ದು ಚಾಸಾ-1 ರವರು ನನಗೆ ಜಮೀನನ್ನು ಉಳುಮೆ ಮಾಡುವಂತೆ ಹೇಳಿದ್ದು , ನಾನು ಜಮೀನು ಉಳುಮೆ ಮಾಡುತ್ತಿದ್ದಾಗ ಪಕ್ಕದ ಊರದ ಮಂಟಿಕೊಪ್ಪಲು ಗ್ರಾಮದ ಚಾಸಾ-1 ರವರ ಪಕ್ಕದ ಜಮೀನಿನವರಾದ ಆರೋಪಿತರು ಗುಂಪು ಕಟ್ಟಿಕೊಂಡು ಬಂದು ಟ್ರಾಕ್ಟರ್ ನಲ್ಲಿ ಜಮೀನನ್ನು ಉಳುಮೆ ಮಾಡುತ್ತಿದ್ದಾಗ ಉಳುಮೆ ಮಾಡಲು ಬಿಡದೇ ಚಾಸಾ-1 ರವರಿಗೆ ಸೂಳೇ ಮಗನೇ , ಬೊಳಿ ಮಗನೇಎಂದು , ಚಾಸಾ-4 ರವರಿಗೆ ರಂಡೆ ಮುಂಡೆ ಎಂದು ಅವಾಚ್ಯ ಶಬ್ದಗಳಿಂದ ಬೈದರು ಎಂದರೆ ಸರಿಯಲ್ಲ. ಆರೋಪಿತರೆಲ್ಲರೂ ಜಮೀನಿನೊಳಗೆ ನುಗ್ಗಿ ನನಗೆ ಉಳುಮೆ ಮಾಡಲು ಬಿಡದೇ ಚಾಸಾ-1 ಮತ್ತು 4 ರವರನ್ನು ಆರೋಪಿತರು ಅಡ್ಡ ಗಟ್ಟಿ ತಳ್ಳಿ , ಬೀಳಿಸಿ ಕೆಟ್ಟ ಪದಗಳಿಂದ ನಿಂದಿಸಿ ನೀವು ಜಮೀನಿನ ಒಳಗೆ ಮತ್ತೇ ಬಂದರೆ ಕೊಲೆ ಮಾಡುವುದಾಗಿ ಕೊಲೆ ಬೆದರಿಕೆ ಹಾಕಿದರು ಎಂದರೆ ಸರಿಯಲ್ಲ. ಜಮೀನು ಉಳುಮೆ ಮಾಡುತ್ತಿದ್ದ ನನಗೂ ಸಹ ಬೈದರು ಎಂದರೆ ಸರಿಯಲ್ಲ. ಚಾಸಾ-6 ರಿಂದ 8 ರವರು ಚಾಸಾ-1 ರವರಿಗೆ ಠಾಣೆಗೆ ಹೋಗಿ ದೂರು ಕೋಡೋಣ ಎಂದುಸಮಾಧಾನ ಪಡಿಸಿ ಜಮೀನಿನಿಂದ ವಾಪಸ್ಸು ಕರೆದುಕೊಂಡು ಹೋದರು ಎಂದರೆ ಸರಿಯಲ್ಲ. ಈ ಬಗ್ಗೆ ಈಗ ಓದಿ ಹೇಳಿದಂತೆ ದಿನಾಂಕಃ 22.11.2023 ರಂದು ಹೇಳಿಕೆ ನೀಡಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿ ಅಲ್ಲಗಳೆದ ಹೇಳಿಕೆಯ ಭಾಗವನ್ನು ನಿಪಿ-3 ಎಂದು ಗುರುತಿಸಲಾಯಿತು. ನನಗೆ ಎಲ್ಲಾ ವಿಚಾರ ಗೊತ್ತಿದ್ದರೂ ಸಹ ಆರೋಪಿತರಿಗೆ ಸಹಾಯ ಮಾಡಬೇಕೆಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಪಾಟೀ ಸವಾಲುಃ</u> ಆರೋಪಿತರ ಪರ ಶ್ರೀಆರ್ ಕೆ ಎಸ್ ವಕೀಲರಿಂದಃ**

ಇಲ್ಲ ಎನ್ನುತ್ತಾರೆ.

**ಮರುವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ.ಹೇ.ಕೇ.ಸ.ಇದೆ.

(ಅನಿತ)
ಪ್ರಧಾನ ಹಿರಿಯ ಸಿವಿಲ್ ಜಡ್ಜ್ ಮತ್ತು
ಜೆ.ಎಂ.ಎಫ್.ಸಿ., ಹುಣಸೂರು.